# ವಾರಕ್ಕೊಂದು ಅಂಗುಲ ಬೆಳೆಯುವವ!



ಹೌದು! ಜೋಶ್ ಗಾಟ್ ಎಂಬ 18 ವರ್ಷದ ಈ ಹುಡುಗ ಇತ್ತೀಚೆಗೆ ವಾರಕ್ಕೊಂದು ಅಂಗುಲ ಬೆಳೆಯುತ್ತಿದ್ದಾನೆ. ಮೂರು ತಿಂಗಳಿಗೆ ಒಂದು ಅಡಿ. ವರ್ಷಕ್ಕೆ ನಾಲ್ಕು ಅಡಿ ಎಂದರೆ ಅದು ನಿಜಕ್ಕೂ ಭಯ ಹುಟ್ಟಿಸುವ ಬೆಳವಣಿಗೆ. ಇದು ಎಲ್ಲಿಗೆ ಹೋಗಿ ನಿಲ್ಲಲಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಸದ್ಯ ಆತನ ಎತ್ತರ 6 ಅಡಿ 10 ಅಂಗುಲ. ಆತನಿಗಾಗಲಿ ಅಥವಾ ಆತನ ಮನೆಯವರಿಗಾಗಲಿ ಇದೇನೂ ಖುಷಿ ಕೊಡುವ ವಿಚಾರವಲ್ಲ. ಈ ಅಸಾಧಾರಣ ಬೆಳವಣಿಗೆ ಅವರಿಗೆಲ್ಲ ಭಯ–ಆತಂಕಗಳನ್ನೇ ಮೂಡಿಸಿದೆ.

ಆತನ ತಾಯಿಯ ಎತ್ತರ ಕೇವಲ 5 ಅಡಿ. ತಂದೆಯದು 5 ಅಡಿ 4 ಅಂಗುಲ. ಹೀಗಾಗಿ ಜೋಶ್ ಗಾಟ್‌ನ ಈ ಬೆಳವಣಿಗೆ ಅನುವಂಶಿಕವೇನಲ್ಲ. ಆತನ ಶರೀರದಲ್ಲಿರುವ ಒಂದು ಸಣ್ಣ ಕ್ರೋಮೋಜೋಮಿನ ಅನುಪಸ್ಥಿತಿಯೇ ಈ ಅಂಕೆ ಇಲ್ಲದ ಬೆಳವಣಿಗೆಗೆ ಕಾರಣ ಎಂಬ ಅಂಶ ಹಲವು ಪರೀಕ್ಷೆಗಳ ನಂತರ ದೃಢಪಟ್ಟಿದೆ.

ಇದೊಂದು ಹೊಸ ಕಾಯಿಲೆಯಂತೆ. ಜೋಶ್‌ನನ್ನು ಬಿಟ್ಟರೆ ವಿಶ್ವದಲ್ಲಿ ಬೇರೆ ಯಾರಿಗೂ ಈ ಕಾಯಿಲೆ ಇಲ್ಲವಂತೆ. ಈತನ ಈ ಕಾಯಿಲೆಯನ್ನು ಮೊಟ್ಟ ಮೊದಲು ಪತ್ತೆ ಹಚ್ಚಿದ್ದು ಅವನ ತಾಯಿ ಎಲ್ಸಟನ್ ಶರಾನ್. ಆಗ ಜೋಶ್‌ಗೆ 11 ವರ್ಷ. ಕೂಡಲೇ ಅವಳು ಅವನನ್ನು ವೈದ್ಯರ ಬಳಿ ಕರೆದೊಯ್ದಳು. ಅವರು ಜೋಶ್‌ನನ್ನು ತಪಾಸಣೆ ಮಾಡಿ, ಇದು ಬೆಳೆಯುವ ವಯಸ್ಸು, ಆತಂಕ ಪಡುವಂತಹುದೇನೂ ಇಲ್ಲ ಎಂದು ಹೇಳಿದರು. ಆಗ ಬೆಳವಣಿಗೆ ಅಷ್ಟು ತೀವ್ರವಾಗಿರಲಿಲ್ಲವೋ ಏನೊ? ಆದರೂ ಆಕೆಗೆ ಸಮಾಧಾನವಾಗಲಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಅವಳು ಹಲವು ವೈದ್ಯರನ್ನು ಭೇಟಿ ಮಾಡಿದಳು. ಅನೇಕ ಪರೀಕ್ಷೆ– ತಪಾಸಣೆಗಳಿಗೆ ಅವನನ್ನು ಒಳಪಡಿಸಿದಳು. ಜಗತ್ತಿನ ಸುವಿಖ್ಯಾತ ಡಾಕ್ಟರರನ್ನೆಲ್ಲ ಸಂಪರ್ಕಿಸಿದಳು. ಆದರೆ ಇನ್ನೂ ಅವಳಿಗೆ ನಿಶ್ಚಿತ ಪರಿಹಾರದ ಭರವಸೆ ಯಾರಿಂದಲೂ ದೊರೆತಿಲ್ಲ.

ಜೋಶ್‌ಗೆ ಹೊಲಿಸಿದ ಬಟ್ಟೆ ವಾರ ಕಳೆಯುವುದರೊಳಗೆ ಕಿರಿದಾಗಿ ಬಿಡುತ್ತದೆ. ಎರಡು ವಾರಕ್ಕೊಮ್ಮೆ ಹೊಸ ಅಳತೆಯ ಬಟ್ಟೆಗಳನ್ನೇ ಹೊಲಿಸಬೇಕು. ಶರೀರದ ತೀವ್ರ ಬೆಳವಣಿಗೆ ಒಂದೇ ಆತನ ಸಮಸ್ಯೆಯಲ್ಲ. ಮಿದುಳಿನ ತೊಂದರೆ, ಅಪಸ್ಮಾರ, ಆಟಿಸಂ, ಎಡಿಎಚ್ ಮುಂತಾದ ಕಾಯಿಲೆಗಳ ಸಮೂಹವೇ ಆತನನ್ನು ಮುತ್ತಿಕೊಂಡಿದೆ.

ಈ ಅಸಾಮಾನ್ಯ ಹಾಗೂ ವಿಶಿಷ್ಟ ಕಾಯಿಲೆಯ ಏಕಮೇವ ವ್ಯಕ್ತಿ ಜೋಶ್ ಇರುವುದು ನ್ಯೂ ಕಾಸಲ್ ಎಂಬ ಪಟ್ಟಣದಲ್ಲಿ. ಅದು ಇಂಗ್ಲೆಂಡಿನಲ್ಲಿರುವ ಒಂದು ಬಂದರು ಪ್ರದೇಶ.

■ ಸುಭಾಸ ಯಾದವಾಡ